## ಹಾ ಮಾ ನಾ ದತ್ತಿ ಬಹುಮಾನ

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿದ್ದ ಡಾ. ವಿಜಯಾ ದಬ್ಬೆಯವರು ೨೦೦೧ರಲ್ಲಿ ತಮ್ಮ ವಿದ್ಯಾಗುರುಗಳಾದ ಹಾ ಮಾ ನಾಯಕ ಅವರ ಹೆಸರಿನಲ್ಲಿ ೭೫ ಸಾವಿರ ರೂಗಳ ದತ್ತಿಯನ್ನು ಪ್ರತಿಷ್ಠಾಪಿಸಿದರು. ಈ ದತ್ತಿ ಹಣದ ಬಡ್ಡಿಯಿಂದ ಬಂದ ಹಣದಲ್ಲಿ ಕನ್ನಡ, ಜಾನಪದ, ಭಾರತೀಯ ಭಾಷಾ ಅಧ್ಯಯನ ವಿಭಾಗದಲ್ಲಿ ಹೆಚ್ಚಿನ ಅಂಕ ಗಳಿಸಿದ ಮೂವರು ವಿದ್ಯಾರ್ಥಿಗಳಿಗೆ ಬಹುಮಾನ ನೀಡುವ ಉದ್ದೇಶವನ್ನೊಳಗೊಂಡಿದೆ.

## ಸಂಸ್ಥೆಯಲ್ಲಿರುವ ಪೀಠಗಳು :

೧. ಕುವೆಂಪು ಕಾವ್ಯಾಧ್ಯಯನ ಪೀಠ : ಇಲ್ಲಿಯವರೆಗಿನ ಸಂದರ್ಶಕ ಪ್ರಾಧ್ಯಾಪಕರು

| | | |
|---|---|---|
| ಪ್ರೊ. ಪ್ರಭುಶಂಕರ | ಪ್ರೊ. ಜಿ. ಎಚ್. ನಾಯಕ್ | ಪ್ರೊ. ಎಚ್. ಜೆ. ಲಕ್ಕಪ್ಪಗೌಡ |
| ಪ್ರೊ. ಎಚ್. ತಿಪ್ಪೇರುದ್ರಸ್ವಾಮಿ | ಪ್ರೊ. ಸಿ. ಪಿ. ಕೃಷ್ಣಕುಮಾರ್ | ಪ್ರೊ. ಕೆ. ಮರುಳಸಿದ್ದಪ್ಪ |
| ಪ್ರೊ. ಜಿ. ಎಸ್. ಶಿವರುದ್ರಪ್ಪ | ಪ್ರೊ. ಪ್ರಧಾನ ಗುರುದತ್ತ | ಪ್ರೊ. ರಾಮೇಗೌಡ |
| ಪ್ರೊ. ಎಸ್.ಎಂ. ವೃಷಬೇಂದ್ರಸ್ವಾಮಿ | ಪ್ರೊ. ಕೆ. ಎಸ್. ಭಗವಾನ | |

೨. ನಾಲ್ವಡಿ ಕೃಷ್ಣರಾಜ ಒಡೆಯರ್ ಪೀಠ (ವಿಶ್ವವಿದ್ಯಾನಿಲಯದ ಆವರ್ತನ ಪೀಠ)
**ಸಂದರ್ಶಕ ಪ್ರಾಧ್ಯಾಪಕರು :** ಪ್ರೊ. ಪಿ. ವಿ. ನಂಜರಾಜೇ ಅರಸ್

೩. ಬಸವೇಶ್ವರ ಸಾಮಾಜಿಕ ಪರಿವರ್ತನ : ಸಂಶೋಧನ ಮತ್ತು ವಿಸ್ತರಣ ಕೇಂದ್ರ
**ಸಂದರ್ಶಕ ಪ್ರಾಧ್ಯಾಪಕರು :** ಪ್ರೊ. ಮಲೆಯೂರು ಗುರುಸ್ವಾಮಿ


ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

ನಿರ್ದೇಶಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ
ಮೈಸೂರು – ೫೭೦ ೦೦೬
ಫೋನ್ : ೦೮೨೧ – ೨೪೧೯೮೭೨, ೨೪೧೯೮೭೬, ೨೪೧೯೩೪೯


ಮೈಸೂರು ವಿಶ್ವವಿದ್ಯಾನಿಲಯ
University of Mysore



# ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ



# ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ



ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ಸ್ಥಾಪನೆ ಒಂದು ಪ್ರಮುಖ ಮೈಲುಗಲ್ಲಾಗಿದೆ. 1927ರ ಜುಲೈನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜಿನಲ್ಲಿ ಪ್ರಾರಂಭವಾದ ಕನ್ನಡ ವಿಭಾಗಕ್ಕೆ ದಿಗ್ಗಜರಾದ ಆಚಾರ್ಯ ಪ್ರೊ. ಬಿ.ಎಂ.ಶ್ರೀ., ಪ್ರೊ. ಟಿ.ಎಸ್.ವೆಂಕಣ್ಣಯ್ಯ, ಪ್ರೊ.ಎ.ಆರ್.ಕೃಷ್ಣಶಾಸ್ತ್ರಿಗಳು ಶೈಕ್ಷಣಿಕ ಶಿಸ್ತು ಮತ್ತು ಬದ್ಧತೆಯಿಂದ ಒಂದು ಸುಭದ್ರವಾದ ಬುನಾದಿ ಹಾಕಿದರು. ರಾಷ್ಟ್ರಕವಿ ಕುವೆಂಪು ಅವರು ಕನ್ನಡ ವಿಭಾಗದ ಮೊದಲ ತಂಡದ ವಿದ್ಯಾರ್ಥಿಯಾಗಿದ್ದುದು ನಮ್ಮ ಸಂಸ್ಥೆಯ ಹೆಮ್ಮೆಯ ಕಿರೀಟಕ್ಕೆ ಸೇರಿದ ಅಮೂಲ್ಯ ವಜ್ರದ ಹರಳು. ವಿಶ್ವವಿದ್ಯಾನಿಲಯವು ಗಂಗೋತ್ರಿಗೆ ಸ್ಥಳಾಂತರಗೊಂಡ ಮೇಲೆ ಪ್ರೊ. ದೇ.ಜ.ಗೌ ಅವರ ದೂರದರ್ಶಿತ್ವದಿಂದ ಕನ್ನಡದೊಂದಿಗೆ ಜಾನಪದ ವಿಜ್ಞಾನ, ಭಾಷಾವಿಜ್ಞಾನ, ದಕ್ಷಿಣ ಭಾರತೀಯ ಅಧ್ಯಯನದಂತಹ ಪೂರಕ ಶಿಸ್ತುಗಳೊಂದಿಗೆ ಮತ್ತು ಹಲವು ಮಹತ್ವಾಕಾಂಕ್ಷೆಯಾದ ಸಂಶೋಧನೆ ಯೋಜನೆಗಳೊಂದಿಗೆ ಕನ್ನಡ ವಿಭಾಗವು ಕನ್ನಡ ಅಧ್ಯಯನ ಸಂಸ್ಥೆ ಎಂದು 1966ರಲ್ಲಿ ವಿಸ್ತಾರವಾದ ವ್ಯಾಪ್ತಿಯನ್ನು ಪಡೆಯಿತು. ಮಹಾಕವಿ ಕುವೆಂಪು ಅವರ ಸ್ಮರಣಾರ್ಥ 1994ರಲ್ಲಿ ಸಂಸ್ಥೆಗೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಎಂದು ಮರುನಾಮಕರಣ ಮಾಡಲಾಯಿತು. ಗಂಗೋತ್ರಿಯ ಹೃದಯ ಭಾಗದಂತಿರುವ ಸಂಸ್ಥೆ ತನ್ನ ಭವ್ಯ ಪರಂಪರೆ ಮತ್ತು ವ್ಯಾಪಕವಾದ ಶೈಕ್ಷಣಿಕ ಚಟುವಟಿಕೆಗಳಿಂದಾಗಿ ಇಂದು ಒಂದು ಕಿರು ವಿಶ್ವವಿದ್ಯಾನಿಲಯದಂತೆ ಬೆಳೆದಿದೆ.



**ಕನ್ನಡ ಎಂ.ಎ. ಮೊದಲನೆ ತಂಡ : ೧೯೨೬**
**ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯನ್ನು ಕಟ್ಟಿ ಬೆಳೆಸಿದ ಹಿರಿಯರು:**

ಪ್ರೊ. ದೇ.ಜ.ಗೌ
ಪ್ರೊ. ಎಲ್. ಬಸವರಾಜು
ಪ್ರೊ. ಜೀ. ಶಂ. ಪರಮಶಿವಯ್ಯ
ಪ್ರೊ. ಜಿ. ಎಚ್. ನಾಯಕ – ಮೊದಲಾದವರು.
ಪ್ರೊ. ಹಾ. ಮಾ. ನಾಯಕ
ಪ್ರೊ. ಎಚ್. ತಿಪ್ಪೇರುದ್ರಸ್ವಾಮಿ
ಪ್ರೊ. ಟಿ. ವಿ. ವೆಂಕಟಾಚಲಶಾಸ್ತ್ರೀ

## ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಸದಸ್ಯ ವರ್ಗ

| | | |
|---|---|---|
| ೧. ಬೋಧಕರು | : | ೦೧೬ |
| ೨. ಶೈಕ್ಷಣಿಕ ಸಿಬ್ಬಂದಿ ಮತ್ತು ಆಡಳಿತ ಸಿಬ್ಬಂದಿ | : | ೦೪೦ |
| ೩. ವಿದ್ಯಾರ್ಥಿಗಳು | : | ೧೦೬ |
| ೪. ಸಂಶೋಧಕರು ವಿದ್ಯಾರ್ಥಿವೇತನ ಸಹಿತ | : | ೧೨೫ |
| ಸಂಶೋಧಕರು ವಿದ್ಯಾರ್ಥಿವೇತನ ರಹಿತ | : | ೦೬೦ |
| ೫. ಮುಕ್ತ ಐಚ್ಛಿಕ ವಿದ್ಯಾರ್ಥಿಗಳು | : | ೪೬೦ |
| ೬. ಎಂ.ಫಿಲ್. ವಿದ್ಯಾರ್ಥಿಗಳು | : | ೦೧೬ |



**ರನ್ನನ ಗದಾಯುದ್ಧ** ಇಲ್ಲಿರುವ ಅತ್ಯಂತ ಪ್ರಾಚೀನ ಹಸ್ತಪ್ರತಿಯಾಗಿದೆ. ೧೮೫೦ರಲ್ಲಿ ಪ್ರತಿ ಮಾಡಲ್ಪಟ್ಟಿರುವ **ಪ್ರಭಾವತಿ ಪರಿಣಯ** ಕಾಲಮಾನದ ದೃಷ್ಟಿಯಿಂದ ಇತ್ತೀಚಿನ ಓಲೆಯ ಹಸ್ತಪ್ರತಿಯಾಗಿದೆ. ಈವರೆಗೆ ಹಸ್ತಪ್ರತಿ ಭಂಡಾರದಲ್ಲಿರುವ ಹಸ್ತಪ್ರತಿಗಳ ಪೈಕಿ ೧೬೦ ಹಸ್ತಪ್ರತಿಗಳನ್ನು ವೈಜ್ಞಾನಿಕವಾಗಿ ಸಂಪಾದಿಸಿ, ಪರಿಷ್ಕರಿಸಿ ಪ್ರಕಟಿಸಲಾಗಿದೆ.

### ೫. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ

ಇದು ಕನ್ನಡ ಅಧ್ಯಯನ ಸಂಸ್ಥೆಯ ಮತ್ತೊಂದು ಪ್ರತಿಷ್ಠಿತ ಯೋಜನೆಯಾಗಿದ್ದು, ಇದರಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಾಪಕರು ಹಾಗೂ ಸಂಶೋಧಕರು ಮುಖ್ಯವಾಗಿ ಲೇಖನದಾರರಾಗಿರುತ್ತಾರೆ. ಸಂಶೋಧನಾತ್ಮಕ ಮತ್ತು ವಿಮರ್ಶಾತ್ಮಕ ಗುಣಗಳಿಗೆ ನಿಷ್ಠವಾಗಿ ಹತ್ತು ಸಂಪುಟಗಳಲ್ಲಿ ಈ ಯೋಜನೆ ಹರಡಿಕೊಂಡಿದೆ. ೧೯೭೪ರಲ್ಲಿ ಮೊದಲ ಸಂಪುಟ ಪ್ರಕಟವಾಗಿದ್ದು ಈವರೆಗೆ ೫ ಸಂಪುಟಗಳು ಪ್ರಕಟವಾಗಿವೆ. ಇದರಲ್ಲಿ ೪ನೆಯ ಸಂಪುಟ ೨ ಭಾಗಗಳನ್ನು ೫ನೇ ಸಂಪುಟ ೪ ಭಾಗಗಳನ್ನು ಹೊಂದಿದೆ. ಉಳಿದ ಸಂಪುಟಗಳ ಸಂಪಾದನಾ ಕಾರ್ಯ ಪ್ರಗತಿಯಲ್ಲಿದೆ.

### ೬. ಹರಿದಾಸ ಸಾಹಿತ್ಯ

೧೯೬೮ ಜುಲೈನಲ್ಲಿ ಈ ಯೋಜನೆ ಪ್ರಾರಂಭವಾಯಿತು. ಯೋಜನೆಯ ಅಂಗವಾಗಿ ಕರ್ನಾಟಕದಾದ್ಯಂತ ಸಂಚರಿಸಿ ಹರಿದಾಸ ಸಾಹಿತ್ಯಕ್ಕೆ ಸಂಬಂಧಿಸಿದಂತೆ ೩೧೦ ಓಲೆ ಹಾಗೂ ಕಾಗದದ ಪ್ರತಿಗಳನ್ನು ಸಂಗ್ರಹಿಸಲಾಯಿತು. ಈವರೆಗೆ ಈ ಯೋಜನೆಯಲ್ಲಿ ೨೫ ಪ್ರಮುಖ ಗ್ರಂಥಗಳು ಪ್ರಕಟವಾಗಿವೆ.

### ೭. ಭಾಷಾಂತರ ಮತ್ತು ಪಠ್ಯಪುಸ್ತಕ

೧೯೬೬-೬೭ರಲ್ಲಿ ಕೇಂದ್ರ ಸರ್ಕಾರದ ಮಂಜೂರು ಮಾಡಿದ ಧನಸಹಾಯದಿಂದ ಈ ಯೋಜನೆ ಪ್ರಾರಂಭವಾಯಿತು. ಪದವಿ ಮತ್ತು ಸ್ನಾತಕೋತ್ತರ ಶಿಕ್ಷಣಗಳಿಗೆ ಸಂಬಂಧಿಸಿದ ಪಠ್ಯಪುಸ್ತಕಗಳನ್ನು ಪರಾಮರ್ಶನ ಗ್ರಂಥಗಳನ್ನು ಕನ್ನಡದಲ್ಲಿ ಪ್ರಕಟಿಸುವುದು ಈ ಯೋಜನೆಯ ಮುಖ್ಯ ಗುರಿಯಾಗಿದ್ದು, ಇದುವರೆಗೆ ಈ ಯೋಜನೆ ಅಡಿಯಲ್ಲಿ ೨೩೭ ಪುಸ್ತಕಗಳನ್ನು ಪ್ರಕಟಿಸಲಾಗಿದೆ. ರಾಷ್ಟ್ರಮಟ್ಟದ ಘನವಿದ್ವಾಂಸರಾದ ಪಿ. ವಿ. ಕಾಣೆ ಅವರ ಧರ್ಮಶಾಸ್ತ್ರದ ಇತಿಹಾಸವನ್ನು ಹಲವು ಸಂಪುಟಗಳಾಗಿ ಮತ್ತು ಪ್ರತಿಷ್ಠಿತ ಭಂಡಾರ್‌ಕರ್ ಪ್ರಾಚ್ಯ ಸಂಶೋಧನಾ ಸಂಸ್ಥೆಯ ಮಹಾಭಾರತದ ಸಟೀಕಾ ಆವೃತ್ತಿಗಳನ್ನು ಈ ಯೋಜನೆಯಲ್ಲಿ ಪ್ರಕಟಿಸಲಾಗಿದೆ.

## ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಧನ ಸಹಾಯದೊಂದಿಗೆ ಪ್ರಾರಂಭಿಸಲಾಗಿರುವ ಶಾಸ್ತ್ರೀಯ ಭಾಷಾ ಕ್ರಿಯಾ ಯೋಜನೆಗಳು

- ಕನ್ನಡ ಕ್ರಿಯಾ ಯೋಜನೆ – ೧ ಕರ್ನಾಟಕ ಅರಸು ಮನೆತನಗಳ ಶಾಸನ ಸಂಪುಟಗಳು
- ಕನ್ನಡ ಕ್ರಿಯಾ ಯೋಜನೆ – ೨ ಪ್ರಾಚೀನ ಕನ್ನಡ ಹಸ್ತಪ್ರತಿಗಳ ಸಂರಕ್ಷಣೆ, ದಾಖಲೀಕರಣ, ಪ್ರಕಟಣೆ ಮತ್ತು ಗಣಕೀಕರಣ
- ಕನ್ನಡ ಕ್ರಿಯಾ ಯೋಜನೆ – ೩ ಕನ್ನಡ ವಿಶ್ವಕೋಶಗಳಲ್ಲಿ ಪ್ರಕಟವಾದ ಲೇಖನಗಳ ವಿಷಯವಾರು ಗ್ರಂಥಗಳ ಪ್ರಕಟಣೆ
- ಕನ್ನಡ ಕ್ರಿಯಾ ಯೋಜನೆ – ೪ ಕನ್ನಡ ವಿಷಯ ವಿಶ್ವಕೋಶ ಕರ್ನಾಟಕ ಸಂಪುಟದ ಅನುವಾದ ಕ್ರಿಯಾಯೋಜನೆ
- ಕನ್ನಡ ಕ್ರಿಯಾ ಯೋಜನೆ – ೫ ಸಾಹಿತ್ಯ ಚಿಂತನೆಗಳ ಪಾರಿಭಾಷಿಕ ಪದವಿವರಣ ಕೋಶ
- ಕನ್ನಡ ಕ್ರಿಯಾ ಯೋಜನೆ – ೬ ಕನ್ನಡದಲ್ಲಿ ಅನ್ಯಭಾಷಾ ಪದನಿಷ್ಪತ್ತಿ ಕೋಶ
- ಕನ್ನಡ ಕ್ರಿಯಾ ಯೋಜನೆ – ೭ ಹೊನ್ನ ಕೋಗಿಲೆ

## ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗದ ಸಹಾಯದೊಂದಿಗೆ ಪ್ರಾರಂಭಿಸಲಾಗಿರುವ ಎಸ್‌ಎಪಿ ಯೋಜನೆ :

೧) ಕನ್ನಡ ಜಾನಪದ ಅಧ್ಯಯನ ಇತಿಹಾಸ

೨) ಆಧುನಿಕ ಕನ್ನಡ ವಿಮರ್ಶೆಯ ಇತಿಹಾಸ ಧನ ಸಹಾಯದ ಮೊತ್ತರೂ. ೨೮,೦೦,೦೦೦
ಪ್ರೊ. ಕೆ.ಎನ್. ಗಂಗಾನಾಯಕ್, ಸಂಯೋಜಕರು; ಡಾ. ಎಂ. ನಂಜಯ್ಯ, ಸಹಾಯಕ ಸಂಯೋಜಕರು
ಶ್ರೀ ರಾಜಣ್ಣ, ಸಂಶೋಧನ ಸಹಾಯಕರು

## ಡಿ.ಐ.ಟಿ. ಮೇಜರ್ ರಿಸರ್ಚ್ ಪ್ರಾಜೆಕ್ಟ್

ವಿಷಯ : "ಡೆವಲಪ್‌ಮೆಂಟ್ ಆಫ್ ದ್ರವಿಡಿಯನ್ ವರ್ಡ್‌ನೆಟ್ : ಆ್ಯನ್ ಇಂಟಿಗ್ರೇಟೆಡ್ ವರ್ಡ್‌ನೆಟ್ ಫಾರ್ ತೆಲುಗು, ತಮಿಳು, ಕನ್ನಡ ಮತ್ತು ಮಲಯಾಳಂ (ಎಕ್ಸ್‌ಕ್ಲೂಸಿವ್ ವರ್ಡ್‌ನೆಟ್ ಫಾರ್ ಕನ್ನಡ)".

| | | |
|---|---|---|
| ಧನ ಸಹಾಯದ ಮೊತ್ತ | | ರೂ. ೩೩,೦೦,೦೦೦ |
| ಪ್ರಿನ್ಸಿಪಲ್ ಇನ್‌ವೆಸ್ಟಿಗೇಟರ್ | : | ಪ್ರೊ. ಸಿ. ಎಸ್. ರಾಮಚಂದ್ರ |
| ಹಿರಿಯ ಭಾಷಾವಿಜ್ಞಾನಿ | : | ಡಾ. ಬಿ. ಪಿ. ಹೇಮಾನಂದ |
| ನಿಘಂಟು ರಚನಾಕಾರರು | : | ಶ್ರೀಮತಿ ಆರ್. ಎಂ. ರಮ್ಯ |
| ನಿಘಂಟು ರಚನಾಕಾರರು | : | ಶ್ರೀಮತಿ ಛಾಯಾದೇವಿ |

## ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗದ ಸಹಾಯದೊಂದಿಗೆ ಪ್ರಾರಂಭಿಸಲಾಗಿರುವ ಮೇಜರ್ ರಿಸರ್ಚ್ ಪ್ರಾಜೆಕ್ಟ್

ವಿಷಯ : ಇಂಡಿಜಿನಿಯಸ್ ನಾಲೆಡ್ಜ್ ಆಫ್ ಓರಲ್ ಟ್ರಡಿಷನ್ ಆಫ್ ಷೆಡ್ಯೂಲ್ಡ್ ಕಾಸ್ಟ್ ಅಂಡ್ ಷೆಡ್ಯೂಲ್ಡ್ ಟ್ರೈಬ್ ವಿಮೆನ್ : ರೆಪ್ರಸೆಂಟೇಟಿವ್ ಮಾಡೆಲ್ಸ್ (ಆಫ್ ಹಾಸನ, ಮಂಡ್ಯ, ಮೈಸೂರು ಮತ್ತು ಚಾಮರಾಜನಗರ ಡಿಸ್ಟ್ರಿಕ್ಟ್, ಕರ್ನಾಟಕ)

ಧನ ಸಹಾಯದ ಮೊತ್ತ : ರೂ. ೪,೫೬,೦೦೦
ಪ್ರಿನ್ಸಿಪಲ್ ಇನ್‌ವೆಸ್ಟಿಗೇಟರ್ : ಡಾ. ಎನ್. ಕೆ. ಲೋಲಾಕ್ಷಿ

## ಸಂಸ್ಥೆಯ ವಿಶೇಷ ಆಕರ್ಷಣೆಗಳು

**ಜಾನಪದ ವಸ್ತುಸಂಗ್ರಹಾಲಯ :** ೧೯೬೮ರಲ್ಲಿ ಸ್ಥಾಪಿತವಾದ ಜಾನಪದ ವಸ್ತುಸಂಗ್ರಹಾಲಯ ಡಾ. ದೇ.ಜ.ಗೌ., ಡಾ.ಜೀ.ಶಂ.ಪರಮಶಿವಯ್ಯ, ಡಾ. ಪಿ. ಆರ್. ತಿಪ್ಪೇಸ್ವಾಮಿ ಅವರ ನಿಷ್ಠೆ ಮತ್ತು ಪರಿಶ್ರಮದಿಂದ ಹಂತ ಹಂತವಾಗಿ ಬೆಳೆಯುತ್ತಾ ಬಂದಿದ್ದು, ಇಂದು ಸುಮಾರು ಇಲ್ಲಿ ಕರ್ನಾಟಕದ ಮೂಲೆ ಮೂಲೆಗಳಿಂದ ಸಂಗ್ರಹಿಸಿದ ಸುಮಾರು ೬,೭೧೯ ಅಮೂಲ್ಯ ವಸ್ತುಗಳ ಬೃಹತ್ ಸಂಗ್ರಹವಿದ್ದು, ಇಡೀ ಏಷ್ಯಾದಲ್ಲಿಯೇ ಅತ್ಯಂತ ದೊಡ್ಡದಾದ ಎರಡನೆಯ ವಸ್ತುಸಂಗ್ರಹಾಲಯವೆಂದು ಪ್ರಸಿದ್ಧಿ ಪಡೆದಿದೆ.

**ಗ್ರಂಥಾಲಯ :** ಸಂಸ್ಥೆಯೊಂದಿಗೇ ಪ್ರಾರಂಭವಾದ ಗ್ರಂಥಾಲಯದಲ್ಲಿ ಇಂದು ೩೪,೬೬೧ ಅಮೂಲ್ಯ ಗ್ರಂಥಗಳಿವೆ. ಈ ಸಂಗ್ರಹದಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಗ್ರಂಥಗಳು, ವಿಶ್ವಕೋಶಗಳು, ನಿಘಂಟುಗಳು ಇದ್ದು, ಸಂಸ್ಕೃತ, ಕನ್ನಡ, ಇಂಗ್ಲಿಷ್, ಮರಾಠಿ, ತಮಿಳು, ತೆಲುಗು ಭಾಷೆಯ ಗ್ರಂಥಗಳು ಸೇರಿಕೊಂಡಿವೆ. ಹಲವು ಹಿರಿಯ ಸಾಹಿತಿಗಳು ದಾನ ರೂಪದಲ್ಲಿ ಕೊಟ್ಟ ಗ್ರಂಥಗಳ ಸಂಗ್ರಹವೂ ಇಲ್ಲಿದೆ.

